PRESSMAN
PRESS CLIPPING

| Publication | Vijayavani |
| --- | --- |
| Language/ Frequency | Kannada/Daily |
| Edition | Bangalore |
| Date | 24 January 2015 |

Client: Paradise

**HEADLINE** : Paradise in Indiranagar

ವಿಜಯವಾಣಿ
24 January 2015, Saturday

# ಇಂದಿರಾನಗರದಲ್ಲಿ 'ಪ್ಯಾರಡೈಸ್'

## ಹೈದ್ರಾಬಾದಿ ಬಿರಿಯಾನಿ ಖ್ಯಾತಿಯ ಹೋಟೆಲ್

**ಬೆಂಗಳೂರು:** ಹೈದರಾಬಾದಿಗೆ ಭೇಟಿ ನೀಡುವ ಪ್ರವಾಸಿಗರು ಹಾಗೂ ಸ್ಥಳೀಯರಿಗೆ ಕಳೆದ 60 ವರ್ಷಗಳಿಂದ ಅತ್ಯುತ್ತಮ ಗುಣಮಟ್ಟದ ಹೈದ್ರಾಬಾದಿ ಬಿರಿಯಾನಿ ಉಣಬಡಿಸುತ್ತಿರುವ ಪ್ರಸಿದ್ಧ 'ಪ್ಯಾರಡೈಸ್' ಬೆಂಗಳೂರಿಗೆ ಆಗಮಿಸಿದೆ.




ಇಂದಿರಾನಗರದಲ್ಲಿ ಸುಸಜ್ಜಿತ, ಅತ್ಯಾಧುನಿಕ ಒಳಾಂಗಣ ವಿನ್ಯಾಸದೊಂದಿಗೆ ಸಿದ್ಧಗೊಂಡಿರುವ ಪ್ಯಾರಡೈಸ್‌ನಿಂದ ಬೆಂಗಳೂರಿಗರು ನಿಜವಾದ ಹೈದ್ರಾಬಾದಿ ಬಿರಿಯಾನಿ ಸವಿಯಬಹುದು. ಹೈದರಾಬಾದ್‌ನಿಂದ ಹೊರಗೆ ಪ್ಯಾರಡೈಸ್ ತೆರೆಯುತ್ತಿರುವ ಮೊದಲ ಮಳಿಗೆ ಇದು. ಹೈದರಾಬಾದಿನಲ್ಲಿ ಸಚಿನ್ ತೆಂಡುಲ್ಕರ್, ಆಮಿರ್ ಖಾನ್, ಸಲ್ಮಾನ್ ಖಾನ್, ಬಾಣಸಿಗ ಸಂಜೀವ್ ಕಪೂರ್ ಸೇರಿ ಅನೇಕ ಖ್ಯಾತನಾಮರು ಆಗಮಿಸಿ ಮೆಚ್ಚುಗೆ ವ್ಯಕ್ತಪಡಿಸಿರುವ ಪ್ಯಾರಡೈಸ್‌ನ ಖಾದ್ಯಗಳು ಪ್ರವಾಸಿಗರಿಗೂ ಅಚ್ಚುಮೆಚ್ಚು. ಬೆಂಗಳೂರಿನ ಮಳಿಗೆಯಲ್ಲಿ ಬಿರಿಯಾನಿ ಜತೆಗೆ ಚೀನಿ, ಭಾರತೀಯ ಹಾಗೂ ಕಾಂಟಿನೆಂಟಲ್ ಸೇರಿ 75ಕ್ಕೂ ಹೆಚ್ಚು ಬಗೆಯ ಖಾದ್ಯಗಳು ಲಭ್ಯವಿವೆ ಎಂದು ಪ್ಯಾರಡೈಸ್ ಸಿಎಂಡಿ ಅಲಿ ಹೆಮ್ಮಟಿ ತಿಳಿಸಿದ್ದಾರೆ.

ನಿಜಾಮರ ಕಾಲದ ಬಿರಿಯಾನಿ ಸ್ವಾದವನ್ನು ಜೀವಂತವಾಗಿರಿಸಿರುವ ಅನುಭವಿ ಬಾಣಸಿಗರು ಖಾದ್ಯ ತಯಾರಿಸಲಿದ್ದಾರೆ. ಇದೇ ಕಾರಣದಿಂದಾಗಿ ಹಲವು ದಶಕಗಳ ಕಾಲ ನಮ್ಮ ಗ್ರಾಹಕರಾಗಿರುವವರು ಅನೇಕರಿದ್ದಾರೆ ಎಂದು ಪ್ಯಾರಡೈಸ್ ನಿರ್ದೇಶಕ ಡಾ. ಕಜಿಮ್ ಹೆಮ್ಮಟಿ ಹೇಳಿದ್ದಾರೆ.